Tumbe Group of International Journals

# Villages of Pavagada Palepatti:- According to Mackenzie records

*Prasanna*[1]

Publication
Tumbe
Group of International Journals
A Peer Reviewed Multidisciplinary Journal
Volume - 5 ; Issue – 2
May - August : 2022
ISSN : 2581-8511
Pages : 76 - 81
Article ID : TUMBE0502K11
Date of Publication: 18/08/2022

Author/s

[1] Associate Professor,
Department of History
Govt. First Grade College, Koratagere
dr.prasanna1966@gmail.com

**Abstract**

Looking at the society during the time of Pavagada Palegars, one gets to know the different aspects of the social life there. According to Mackenzie's unpublished English document, the kingdom was initially limited in revenue, consisting of Pavagada and a few areas around it. Hyderali after winning this area from the local leaders separated some villages from Nidugallu area and expanded them by adding them to Pavagada. After this region was handed over to Tipu, he arrived at Pavagad and reviewed its revenue and issued an order to annex some towns from Rayadurga and Penugonda which were large neighboring areas of Pavagad. According to that order some villages from Penugonda towards Roddam and Tirumalai side of Rayadurga region were included in Pavagada.

**Keywords:** Pavagada, Kannamedi, Raicherlu, Gummagatta, Kamana Durga.

Tumbe Group of International Journals
ISSN: 2581-8511 Volume-5(2)2022

# ಪಾವಗಡ ಪಾಳೆಪಟ್ಟಿನ ಗ್ರಾಮಗಳು:- ಮೆಕೆಂಜಿ ದಾಖಲೆಯನ್ನಾಧರಿಸಿ

**ಪ್ರಸನ್ನ**

ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಕೊರಟಗೆರೆ

**ಪ್ರಸ್ತಾವನೆ:**

ಪಾವಗಡ ಪಾಳೇಗಾರರ ಕಾಲದ ಸಮಾಜವನ್ನು ನೋಡುವಾಗ ಅಲ್ಲಿನ ಸಾಮಾಜಿಕ ಜೀವನದ ವಿವಿಧ ಮುಖಗಳ ಪರಿಚಯವಾಗುತ್ತದೆ. ಮೆಕೆಂಜಿ ಅಪ್ರಕಟಿತ ಇಂಗ್ಲೀಷ್ ದಾಖಲೆಯ ಪ್ರಕಾರ ಈ ರಾಜ್ಯ ಆರಂಭದಲ್ಲಿ ಪಾವಗಡ ಮತ್ತು ಅದರ ಸುತ್ತ ಮುತ್ತಲಿನ ಕೆಲವೇ ಪ್ರದೇಶಗಳನ್ನು ಒಳಗೊಂಡು ಸೀಮಿತ ಆದಾಯ ಹೊಂದಿತ್ತು. ಹೈದರಾಲಿಯು ಈ ಪ್ರದೇಶವನ್ನು ಅಲ್ಲಿನ ನಾಯಕರಿಂದ ಗೆದ್ದುಕೊಂಡಮೇಲೆ ನಿಡುಗಲ್ಲು ಪ್ರದೇಶದಿಂದ ಕೆಲವಾರು ಹಳ್ಳಿಗಳನ್ನು ಬೇರ್ಪಡಿಸಿ ಅವುಗಳನ್ನು ಪಾವಗಡಕ್ಕೆ ಸೇರಿಸಿ ವಿಸ್ತಾರ ಮಾಡಿದನು. ಈ ಪ್ರದೇಶ ಟಿಪ್ಪುವಿನ ಹಸ್ತಾಂತರವಾದಮೇಲೆ ಅವನು ಪಾವಗಡಕ್ಕೆ ಆಗಮಿಸಿ ಅದರ ಆದಾಯವನ್ನು ಪರಿಶೀಲಿಸಿ ಪಾವಗಡದ ನೆರೆಯ ದೊಡ್ಡ ಪ್ರದೇಶಗಳಾಗಿದ್ದ ರಾಯದುರ್ಗ ಮತ್ತು ಪೆನುಗೊಂಡದಿಂದ ಕೆಲವು ಊರುಗಳನ್ನು ಪಾವಗಡಕ್ಕೆ ಸೇರಿಸುವ ಆದೇಶ ಹೊರಡಿಸಿದನು. ಆ ಆದೇಶದ ಪ್ರಕಾರ ಪೆನುಗೊಂಡದಿಂದ ರೊದ್ದಂ ತರಫಿನ ಮತ್ತು ರಾಯದುರ್ಗ ಪ್ರದೇಶದ ತಿರುಮಲೈ ತರಫ್‌ನ ಕೆಲವಾರು ಹಳ್ಳಿಗಳನ್ನು ಪಾವಗಡಕ್ಕೆ ಸೇರಿಸಲಾಯಿತು.

**ಕೀವರ್ಡ್**: ಪಾವಗಡ, ಕನ್ನಮೇಡಿ, ರಾಯಚೆರ್ಲು, ಗುಮ್ಮಘಟ್ಟ, ಕಾಮನ ದುರ್ಗ.

**ಪೀಠಿಕೆ:**

ಬ್ರಿಟಿಷರು ದೇಶೀಯ ಸಾಹಿತ್ಯ ಹಾಗೂ ಸಂಸ್ಕೃತಿಗಳ ಅರಿವನ್ನು ಪಡೆದುಕೊಳ್ಳಲು ವಾಸ್ತುಶಿಲ್ಪ, ಶಾಸನಗಳ ಅಧ್ಯಯನ, ಪ್ರಾಚೀನ ಗ್ರಂಥಗಳ ಶೋಧನೆ, ಶಬ್ದಕೋಶಗಳ ರಚನೆ ಮೊದಲಾದ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಹಲವು ರೀತಿಯಲ್ಲಿಯಶಸ್ಸನ್ನು ಸಾಧಿಸಿದ್ದರು.ಅವರಲ್ಲಿಕ್ರಿಸ್ತಶಕ 1754-1821 ರವರೆಗೆ ಜನಿಸಿದ್ದ ಕರ್ನಲ್ ಮೆಕೆಂಜಿಯವರುಒಬ್ಬರು.ಅವರು ಹುಟ್ಟಿದ್ದು ಸ್ಕಾಟೆಂಡ್‌ನ ಲೂಯಿ ದ್ವೀಪದಲ್ಲಿ, ತಂದೆ ಮಾಡೋಕ ಮೆಕೆಂಜಿ, ತಾಯಿ ಬರ್ಬರ್ ಮೆಕೆಂಜಿ, ಫ್ರಾನ್ಸಿಸ್ ಎಂಬುವವನ ಸಲಹೆಯಂತೆಗಣಿತಕ್ಕೆ ಸಂಬಂಧಪಟ್ಟ ವಿಷಯವನ್ನು ಸಂಗ್ರಹಿಸಲು ಕ್ರಿ.ಶ.1783 ರಲ್ಲಿ ಭಾರತಕ್ಕೆ ಬಂದನು.ಇವನನ್ನು ಕಳುಹಿಸಿಕೊಟ್ಟ ಫ್ರಾನ್ಸಿಸ್ ಕೆಲವೆ ದಿನಗಳಲ್ಲಿ ಮರಣ ಹೊಂದಿದ ಮೇಲೆ ಮೆಕೆಂಜಿಯುಮದ್ರಾಸಿನಲ್ಲಿ ಈಸ್ಟ್ಇಂಡಿಯಾಕಂಪನಿಯಲ್ಲಿ ಕೆಲಸಕ್ಕೆ ಸೇರಿ ಕರ್ನಲ್ ಹುದ್ದೆಯವರೆಗೂ ಬಡ್ತಿ ಪಡೆದನು.ಕ್ರಿ. ಶ. 1821 ಮೇ 8 ರಂದು ಕಲ್ಕತ್ತಾದ ತನ್ನ ಮನೆಯಲ್ಲಿ ಮರಣ ಹೊಂದಿದನು. ಈ ಅವಧಿಯಲ್ಲಿ ಈತನು ಸೈನ್ಯದ ಕೆಲಸದಜೊತೆಗೆ ಇತಿಹಾಸಕ್ಕೆ ಸಂಬಂಧಿಸಿದ ಕ್ಷೇತ್ರಕಾರ್ಯವನ್ನು ಮಾಡಿ ಮಾಹಿತಿಯನ್ನು ಸಂಗ್ರಹಿಸಿದ. ಆ ಕೆಸಲದಲಿ ೆಲಆತನಿಗೆ ನೆರವಾದವರೆಂದರೆ ಕವಾಲಿ ಬೋರಯ್ಯ, ಆತನತಮ್ಮ ಲಕ್ಷ್ಮಯ್ಯ ಮತು ೆತಹುಲಿಗುಡ್ಡ ಮಲ್ಲಯ್ಯ, ಅಲ್ಲದೆ ಸ್ಥಳೀಯ ವ್ಯಕ್ತಿಗಳು.ಇದರ ಫಲವಾಗಿ ಆತನು 1568

ಹಸ್ತಪ್ರತಿಗಳನ್ನು, 8070 ಶಾಸನ ನಕಲು, 79 ನಕ್ಷೆ, 2630 ಚಿತ್ರ, 6218 ನಾಣ್ಯ, 106 ಪ್ರಾಚೀನ ವಿಗ್ರಹಗಳನ್ನು ಸಂಗ್ರಹಿಸಿದ್ದನು. ಈ ಸಂಗ್ರಹಕ್ಕಾಗಿ ಆತ ಖರ್ಚುಮಾಡಿದ ಹಣ 15000 ಪೌಂಡ್.ಮೆಕೆಂಜಿ ಮರಣ ನಂತರ ಬ್ರಿಟಿಷ್ ಸರ್ಕಾರಆತನ ಹೆಂಡತಿಯಿಂದ 10000 ಪೌಂಡ್‌ಗೆ ಅವೆಲ್ಲವುಗಳನ್ನು ಖರೀದಿಸಿ 1285ರಲ್ಲಿ ಇಂಗ್ಲೆಂಡಿಗೆ ಕಳುಹಿಸಿತು.ಈಗ ವಿಕ್ಟೋರಿಯಾ ವಸ್ತುಸಂಗ್ರಹಾಲಯ ಮತ್ತು ಇಂಡಿಯಾ ಆಫೀಸ್ ಲೈಬ್ರರಿಗಳಲ್ಲಿವೆ.

ಆ ಸಂಗ್ರಾಹಾಲಯದಲ್ಲಿ ಪಾವಗಡ ಪಾಳೇಗಾರರಿಗೆ ಸಂಬಂಧಿಸಿದ ದಾಖಲೆಯೂ ಇದೆ. ಇದರಲ್ಲಿ ಅವನು ಈ ವಿವರಗಳನ್ನು ಸರ್ಕಾರಿ ಅಧಿಕಾರಿಗಳಾದ ಅಮಲ್ದಾರ್‌ತಿಮ್ಮರಸಯ್ಯ, ಶಿರಸ್ತೆದಾರರಾದ ಲಕ್ಷ್ಮನರಸಯ್ಯ ಮತ್ತುತಿರುಮಲರಾವ್‌ರವರಿಂದ ಪಡೆದುಕೊಂಡಿದ್ದೇನೆಂದು ಹೇಳಿದ್ದಾನೆ. ಇವುಗಳನ್ನೆಲ್ಲಾ ಇಂಗ್ಲಿಷ್ ಭಾಷೆಯಲ್ಲಿ ಬರೆಯಲಾಗಿದ್ದು, ಈ ದಾಖಲೆಯುಅವರ ಮನೆತನz Àರಾಜಕೀಯಚರಿತ್ರೆ ಹಾಗೂ ಇತರೆ ವಿವರವನ್ನು ಒಳಗೊಂಡಿದೆ.ಆದರೆ ಈ ದಾಖಲೆಯನ್ನು ಆಧರಿಸಿ ಡಾ. ಡಿ. ಎನ್. ಯೋಗೀಶ್ವರಪ್ಪನವರು ಪಾವಗಡ ಪಾಳೆಪಟ್ಟಿನ ರಾಜಕೀಯಚರಿತ್ರೆಯನ್ನು ಸಮಗ್ರವಾಗಿ ಅಧ್ಯಯನಮಾಡಿದ್ದಾರೆ. ಆದರೆ ಅವರು ದಾಖಲೆಯಲ್ಲಿರುವ ಪಾಳೆಪಟ್ಟಿಗೆ ಸೇರಿದ ಗ್ರಾಮಗಳ ವಿವರವನ್ನುಕೈಬಿಟ್ಟಿರುವುದು ಕಂಡುಬಂದಿರುತ್ತದೆ. ಆದ್ದರಿಂದ ನಾನು ಅದೇ ದಾಖಲೆಯನ್ನಾಧರಿಸಿ ಪಾವಗಡ ಪಾಳೇಪಟ್ಟಿಗೆ ಸೇರಿಕೊಂಡಿದ್ದ ಗ್ರಾಮಗಳ ಮತ್ತು ಆ ಗ್ರಾಮಗ ಕೇಂದ್ರಗಳ ವಿವರಗಳನ್ನು ನೀಡಲು ಪ್ರಯತ್ನಿಸಿದ್ದೇನೆ.

ಪಾವಗಡ ಪಾಳೇಪಟ್ಟು 16ನೇ ಶತಮಾನದ ಕೊನೆಯಲ್ಲಿ ಆರಂಭವಾಗಿ 18 ನೇ ಶತಮಾನದಕೊನೆಯಲ್ಲಿ ಹೈದರ್‌ಅಲಿಯಿಂದ ಅಂತ್ಯಗೊಂಡಿತು. ಅಂದು ಈ ಪಾಳೇಪಟ್ಟಿನ ಸುತ್ತ ಪಶ್ಚಿಮದಲ್ಲಿ ನಿಡಗಲ್ ನಾಯಕರರಾಜ್ಯ, ದಕ್ಷಿಣದಲ್ಲಿ ಮಡಕಸಿರ ನಾಯಕರರಾಜ್ಯ, ಮಿಡಿಗೇಶಿ ಅರಸರು, ಪೂರ್ವದಲ್ಲಿ ದೊಡ್ಡಬಳ್ಳಾಪುರ ನಾಯಕರರಾಜ್ಯ, ಉತ್ತರದಲ್ಲಿಚಿತ್ರದುರ್ಗ ಹಾಗೂ ನಾಯಕನಹಟ್ಟಿ ಮತ್ತುರಾಯದುರ್ಗ ಪಾಳೇಪಟ್ಟುಗಳಿಂದ ಸುತ್ತುವರೆದಿತ್ತು. ಇಂತಹ ಸನ್ನಿವೇಶದಲ್ಲಿ ಅವರಿಗೆರಾಜ್ಯ ವಿಸ್ತಾರ ಮಾಡುವುದಕ್ಕೆ ಹಾಗೂ ಇದ್ದ ರಾಜ್ಯವನ್ನು ಉಳಿಸಿಕೊಳ್ಳುವುದಕ್ಕೆ ತಮ್ಮಸೀಮಿತ ಆದಾಯದಲ್ಲಿ ಹೋರಾಟ ನಡೆಸಬೇಕಿತ್ತು.ಆದರೂ ಈ ಮನೆತನ ಸುಮಾರು 175 ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದು ಅಲ್ಲಿನ ಸಂಸ್ಕøತಿಗೆ ತಮ್ಮದೇ ಆದ ಕೊಡುಗೆಯನ್ನು ಸಲ್ಲಿಸಿರುವುದು ಕಂಡುಬರುತ್ತದೆ. ಹೈದರ್‌ಅಲಿಯು ಈ ಪ್ರದೇಶವನ್ನು ಅಲ್ಲಿನ ನಾಯಕರಿಂದಗೆದ್ದುಕೊಂಡ ಮೇಲೆ ನಿಡಗಲ್ ಪ್ರದೇಶದಿಂದ ಕೆಲವಾರು ಹಳ್ಳಿಗಳನ್ನು ಬೇರ್ಪಡಿಸಿ ಅವುಗಳನ್ನು ಪಾವಗಡಕ್ಕೆ ಸೇರಿಸಿ ವಿ' ಸ್ತಾರ ಮಾಡಿದ್ದನು. ಈ ಪ್ರದೇಶ ಟಿಪ್ಪುವಿಗೆ ಹಸ್ತಾಂತರವಾದ ಮೇಲೆ ಅವನು ಪಾವಗಡಕ್ಕೆ ಆಗಮಿಸಿ ಅದರ ಆದಾಯವನ್ನುಪರಿಶೀಲಿಸಿ ಪಾವಗಡದ ನೆರೆಯದೊಡ್ಡ ಪ್ರದೇಶಗಳಾಗಿದ್ದ ರಾಯದುರ್ಗ ಮತ್ತು ಪೆನುಗೊಂಡದಿಂದ ಕೆಲವು ಊರುಗಳನ್ನು ಪಾವಗಡಕ್ಕೆ ಸೇರಿಸುವಆದೇಶ ಹೊರಡಿಸಿದ್ದನು.ಆ ಆದೇಶದ ಪ್ರಕಾರ ಪೆನುಗೊಂಡದಿಂದರೊದ್ದಂ, ತರಫಿನ ಮತ್ತುರಾಯದುರ್ಗ ಪ್ರದೇಶದತಿರುಮಲೈ, ತರಫ್‌ನ ಕೆಲವಾರು ಹಳ್ಳಿಗಳನ್ನು ಪಾವಗಡಕ್ಕೆ ಸೇರಿಸಲಾಯಿತು. ಇದರಿಂದ ಪಾವಗಡ ಪ್ರಾಂತ್ಯದ ಆದಾಯ ಹೆಚ್ಚಾಯಿತು.ಒಟ್ಟಾರೆ ಪಾವಗಡವುಟಿಪ್ಪುವಿನ ಕಾಲದಲ್ಲಿ ಜಿಲ್ಲೆಯಾಗಿ ಮಾರ್ಪಟ್ಟಿತ್ತು.ಈ ಜಿಲ್ಲೆಯನ್ನು 5 ತರಫ್‌ಗಳನ್ನಾಗಿ (ಹೋಬಳಿ) ವಿಂಗಡಿಸಲಾಯಿತು. ಅವುಗಳೆಂದರೆ

- ಕನ್ನಮೇಡಿ
- ಪಾವಗಡ
- ರಾಯಚೆರ್ಲು
- ಗುಮ್ಮಘಟ್ಟ
- ಕಾಮನ ದುರ್ಗ

**ಗ್ರಾಮವಿವರ**

ಕ್ರಿ. ಶ. 1801ರ ಮೆಕೆಂಜಿದಾಖಲೆಯ ಪ್ರಕಾರ ಈ ಜಿಲ್ಲೆಯಲಿ ೆಲಅಂದು ಒಟ್ಟು 113 ಗ್ರಾಮಗಳಿದ್ದು, ಈ ರೀತಿ ಕೆಳಗಿನ ಟೇಬಲ್‌ನಲಿ ೆಲತೋರಿಸಲಾಗಿದೆ.

| ಗ್ರಾಮ | ಕನ್ನಮೇಡಿ | ಪಾವಗಡ | ರಾಯಚೆರ್ಲು | ಗುಮ್ಮಘಟ್ಟ | ಕಾಮನದುರ್ಗ | ಒಟ್ಟು |
|---|---|---|---|---|---|---|
| ಅಸಲಿ | 09 | 21 | 04 | 08 | 03 | 45 |
| ದಖಲಿ | 17 | 18 | 12 | 11 | 10 | 68 |
| ವಾಸದಊರು | 20 | 32 | 13 | 15 | 13 | 93 |
| ನಾಶ | 06 | 07 | 03 | 04 | - | 20 |
| ಒಟ್ಟು | 26 | 39 | 16 | 19 | 13 | 113 |

***ಮೆಕೆಂಜಿ ಅಪ್ರಕಟಿತ ಇಂಗ್ಲಿಷ್‌ದಾಖಲೆ 1801***

ಹೀಗೆ ಪಾವಗಡ ನಾಯಕರರಾಜ್ಯವನ್ನು ಹೈದಾರಲಿ, ಟಿಪ್ಪು ಸುಲ್ತಾನರುಗೆದ್ದುಕೊಂಡಾಗ ಅದು ಚಿಕ್ಕಪ್ರಾಂತ್ಯವಾದ್ದುದ್ದರಿಂದ ಅದನ್ನು ವಿಶಾಲ ಮಾಡುವ ಉದ್ದೇಶದಿಂದ ಕೆಲಭಾಗಗಳನ್ನು ನೆರೆಯತರಫ್‌ನಿಂದ ಇದಕ್ಕೆ ಸೇರಿಸಲಾಯಿತು.ಆದ್ದರಿಂದ ಈ ದಾಖಲೆಯ ಆಧಾರದ ಮೇಲೆ ಪರೋಕ್ಷವಾಗಿ ಹೇಳುವುದಾದರೆ ಪಾವಗಡ ನಾಯಕರಕಾಲದಲ್ಲಿ ಅವರ ರಾಜ್ಯವು ಪ್ರಾಯಶಃ 1801 ರಲ್ಲಿದ್ದಷ್ಟು ವಿಶಾಲವಾಗಿರಲಿಲ್ಲ. ಆದಾಗ್ಯೂರಾಜ್ಯದ ಏರಿಳಿತದ ಸಂದರ್ಭದಲ್ಲಿ ಇದರಷ್ಟೆಇದ್ದರಿಬಹುದು ಎಂದು ಊಹಿಸಬಹುದು.ಇಂತಹರಾಜ್ಯದಲ್ಲಿ ಇದ್ದ ಗ್ರಾಮಗಳ ಹೆಸರನ್ನುಮೆಕೆಂಜಿಯು ದಾಖಲಿಸಿದ್ದಾನೆ. ಆ ಹಳ್ಳಿಗಳಲ್ಲಿ ಇಂದು ಆನೇಕವೂ ನಶಿಸಿಹೋಗಿವೆ. ತರಫ್‌ಗಳ ಆಡಳಿತದ ಕೇಂದ್ರವಾಗಿದ್ದಕನ್ನಮೇಡಿ, ಗುಮ್ಮಘಟ್ಟಇಂದುಕಸಬ ಪಾವಗಡ ಹೋಬಳಿಗೆ ಸೇರಿಸಿದ್ದಾರೆ.ರಾಯಚೆರ್ಲು ಮತ್ತುಕಾಮನದುರ್ಗ ನಾಗಲಮಡಿಕೆ ಹೋಬಳಿಗೆ ಸೇರಿವೆ. ಆದ್ದರಿಂದಅಂದು ಪಾವಗಡ ನಾಯಕರರಾಜ್ಯವು ಇಂದಿನ ಕಸಬ ಪಾವಗಡ ಮತ್ತು ನಾಗಲಮಡಿಕೆ ಹೋಬಳಿಗಳನ್ನು ಸೇರಿದ್ದಾರೆ. ಎಷ್ಟು ವಿಶಾಲವಾಗಿತ್ತೋ ಅಷ್ಟು ಮಾತ್ರ ವಿಸ್ತಾರವಾಗಿತ್ತೆಂದು ಹೇಳಬಹುದು.ಆದರೆ ಇಂದಿನ ಪಾವಗಡತಾಲ್ಲೂಕಿನಅರ್ಧಭಾಗ ನಾಯಕರಅಧೀನದಲ್ಲಿತ್ತು ಎನ್ನಬಹುದು. ಅವರರಾಜ್ಯದಲ್ಲಿಅಂದು ಸೇರಿಕೊಂಡಿದ್ದ ಗ್ರಾಮಗಳ ಹೆಸರನ್ನುಮೆಕೆಂಜಿಯು 1801ರಅಕ್ಟೋಬರ್‌ನಲ್ಲಿ ಅಮಲ್ದಾರ್‌ತಿಮ್ಮರಸಯ್ಯ ಮತ್ತು ಶಿರಸ್ತೇದಾರರರಾದ ಲಕ್ಷ್ಮಿನರಸಯ್ಯ ಹಾಗೂ ತಿರುಮಲರಾವ್‌ರವರಿಂದ ದಾಖಲಿಸಿಕೊಂಡಿದ್ದಾನೆ. ಅದರ ಸಂಗ್ರಹವನ್ನು ನೀಡಲಾಗಿದೆ.

| ತರಫ್‌ಕನ್ನಮೇಡಿ ಸೇರಿದ ಗ್ರಾಮಗಳು | ತರಫ್ ಪಾವಗಡ |
|---|---|
| 1. ಕಸಬ ಕನ್ನಮೇಡಿ | 1. ಕಸಬ ಪಾವಗಡ |
| 2. ವೀರಲಗೊಂದಿ | 2. ರಂಗಧಾಮನಹಳ್ಳಿ |
| 3. ಉಲ್ಲಕನ್ನಮೇಡಿ | 3. ಅದ್ದೂಲಪಳ್ಳಿ |
| 4. ವೋಬನಹಳ್ಳಿ | 4. ಸಿಂಗಾರೆಡ್ಡಿಹಳ್ಳಿ |
| 5. ಅವ್ವುಲಕಡೇರಹಳ್ಳಿ | 5. ಶ್ರೀರಂಗಾಪುರಂ |
| 6. ಸುಂಕಾಪುರ | 6. ನರಸಿಂನಹಳ್ಳಿ |
| 7. ಕುರುಬರಪಲ್ಲಿ | 7. ಕಂಬಾಲಹಳ್ಳಿ |
| 8. ಬ್ಯಾಡನೂರು | 8. ಬುಗುಡೂರು |
| 9. ಮಾದೇಬಂಡ | 9. ಗ್ಯಾದಿಗುಂಟೆ |
| 10. ಹೊಸಕೋಟೆ | 10. ಬೈರಾಪುರ |
| 11. ಬಂಗಾರನಾಯ್ಕನ ಬೆಟ್ಟ | 11. ವಡ್ಡ್ರಾವು |
| 12. ಕೋಲಬಂಡೆ | 12. ಕಡಂಗ್ಲಗುಂಟೆ |
| 13. ಬೊಮತ್ತಪಲ್ಲಿ | 13. ಜಾಜುರಾಯನ ಹಳ್ಳಿ |
| 14. ಕಿಲ್ಲಾರಹಳ್ಳಿ | 14. ಕೊಮಾರ್ಲಪಳ್ಳಿ |
| 15. ಚೀಲಗಾನಹಳ್ಳಿ | 15. ಐಯಾರಪಲ್ಲಿ |
| 16. ಕೃಷ್ಣಗಿರಿ | 16. ದಸರಮ್ಮನ ಹಳ್ಳಿ |
| 17. ಕಡೇರಹಳ್ಳಿ | 17. ಹೊಸಹಳ್ಳಿ |
| 18. ಗುಂಡ್ಲಪಲ್ಲಿ | 18. ಕಣಕಾಲಬಂಡ |
| 19. ನಲಿಗಾನಹಳ್ಳಿ | 19. ಗಣೇಶಪುರ |
| 20. ಬಾಲಂಪಲ್ಲಿ | 20. ವುಪ್ಪಾರಹಳ್ಳಿ |
| 21. ಗುಂಡಾರ್ಲಹಳ್ಳಿ | 21. ತಿಮ್ಮನಾಯಕನಪೇಟೆ |
| 22. ರಾಜವಂಟ್ರಿ | 22. ಪನ್ನಸಮುದ್ರ |
| 23. ಚಿಕ್ಕನಾಯಕನಹಳ್ಳಿ | 23. ತೇಟಿಮಕುಲಪಲ್ಲಿ |
| 24. ಪಾಲಕುಂಟೆ | 24. ನಾಗಲಮಡಿಕೆ |
| 25. ಗೊರುಸು ಮಮೇಡಿ | 25. ಸುಬ್ಬರಾಯನಹಳ್ಳಿ |
| 26. 26. ಸುಲ್ತಾನಪುರ | 26. ತಿಮ್ಮಮ್ಮನಹಳ್ಳಿ |
| | 27. ತೆಪ್ಪಗಾನದೊಡ್ಡಿ |
| | 28. ಪೆಂಡ್ಲಜೀವಿ |
| | 29. ರಾಗೀಗುಂಟ |
| | 30. ಕೊಡಮಡುಗು |
| | 31. ಕಡಪಾಲಕೆರೆ |
| | 32. ಸುಂಕಾರ್ಲಕುಂಟೆ |
| | 33. ಅಚ್ಚಮಚಮ್ಮನಹಳ್ಳಿ |
| | 34. ಕಣಮೇಹಳ್ಳಿ |
| | 35. ಪಳವಳ್ಳಿ |
| | 36. ಈರಮ್ಮನಹಳ್ಳಿ |
| | 37. ಗಂಗಸಾಗರ |

| | |
|---|---|
| | 38. ತಿಮ್ಮಾಪುರ<br>39. ಗರುಡಾಪುರ |

| ತರಫ್‌ರಾಯಚೆರ್ಲು | ತರಫ್‌ಗುಮ್ಮಘಟ್ಟ | ತರಫ್‌ಕಾಮನದುರ್ಗ |
|---|---|---|
| 1. ಕಸಬಾ ರಾಯಚೆರ್ಲು<br>2. ಬಳ್ಳಸಮುದ್ರಂ<br>3. ಅಚ್ಚಂಪಲ್ಲಿ<br>4. ಪೆದ್ದನಾಯ್ಕನಪಲ್ಲಿ<br>5. ಸಂತೇಪುರಂ<br>6. ಅಪ್ಪಾಜಿಪಲ್ಲಿ<br>7. ರೆಡ್ಡಿವಾರಪಲ್ಲಿ<br>8. ಗೊಲ್ಲಪಲ್ಲಿ<br>9. ವಳ್ಳೂರು<br>10. ಕೇತಗಾನಚೆರ್ಲ<br>11. ಪಸೂಲಗುಂಡಂಪಲ್ಲಿ<br>12. ತಿರುಮಣಿ<br>13. ಯರ್ಾಪ್ಪೆ<br>14. ನಾಗಪಲ್ಲಿ<br>15. ಹುಸೇನ್‌ಪುರ | 1. ಕಸಬಾ ಗುಮ್ಮಘಟ್ಟ<br>2. ಬ್ಯಾಡರಹಳ್ಳಿ<br>3. ತಿಮ್ಮನಹಳ್ಳಿ<br>4. ಗಂಗಾರಸಂ<br>5. ವಿರುಪಸಂದ್ರ<br>6. ಗೌಡೇಟಿ<br>7. ಬಳಪದಹಳ್ಳಿ<br>8. ಬೆನಕನಹಳ್ಳಿ<br>9. ಚೌಲಾಪುರ<br>10. ಮುರಾರಿರಾಯನಹಳ್ಳಿ<br>11. ಅಕ್ಕಮ್ಮನಹಳ್ಳಿ<br>12. ಚಿನ್ನಮರೆಡ್ಡಿಹಳ್ಳಿ<br>13. ನಾರಕುಂಟೆ<br>14. ಕನಕಾಪುರ<br>15. ಗೊಲ್ಲಹಳ್ಳಿ<br>16. ಮಾಚರಾಜಹಳ್ಳಿ<br>17. ನೇರದಗುಂಟೆ<br>18. ವೆಂಕಟಾಪುರ<br>19. ದೊಮ್ಮತಮರಿ | 1. ಕಸಬಾ ರಾಮಪೇಟೆ<br>2. ಬೂಪೂರು<br>3. ಮೀನಗುಂಟೆಪಲ್ಲಿ<br>4. ಕೆಂಚಗಾನಹಳ್ಳಿ<br>5. ಸೂಲನಾಯ್ಕನಪಲ್ಲಿ<br>6. ಹನುಮನಾಯ್ಕನಕೊಂಡ<br>7. ಮದನಪಲ್ಲಿ<br>8. ಕೊಂಡಕಿಂಡಪಲ್ಲಿ<br>9. ಬೊಮ್ಮಗಾನಪಲ್ಲಿ<br>10. ದಳವಾಯಿಹಳ್ಳಿ<br>11. ಬುಡ್ಡಾರೆಡ್ಡಿಪಲ್ಲಿ<br>12. ಯರ್ರಂಪಲ್ಲಿ<br>13. ಕೇತಗಾನಪೆಚರ್ಲ |

ಈ ಮೇಲಿನ ಗ್ರಾಮ ನಾಮಗಳನ್ನು ಇಂದು ಪರಿಶೀಲಿಸಿದಾಗ ಒಟ್ಟು 113 ಗ್ರಾಮಗಳಲ್ಲಿ 46 ಗ್ರಾಮಗಳು ನಶಿಸಿಹೋಗಿರುವುದು ಕಂಡುಬರುತ್ತದೆ.ಒಟ್ಟಾರೆ ಈ ದಾಖಲೆಯಿಂದ ಪಾವಗಡ ಪಾಳೇಪಟ್ಟು ಕಡಿಮೆ ಆದಾಯವನ್ನು ಹೊಂದಿದ್ದರಿಂದ ಹೈದರ್ ಮತ್ತು ಟಿಪ್ಪುಕಾಲದಲ್ಲಿಅದರ ಆದಾಯವನ್ನು ಹೆಚ್ಚಿಸಲು ನೆರೆಯ ಪಾಳೆಪಟ್ಟುಗಳಿಂದ ಆನೇಕ ಗ್ರಾಮಗಳನ್ನು ಸೇರಿಸಿ ಅದನ್ನು ವಿಶಾಲವಾಗಿ ಮಾಡಿದರು. ಪಾವಗಡತರಫ್‌ಯೆಂದುಕರೆದಿದ್ದು ಸ್ಪಷ್ಟವಾಗುತ್ತದೆ.

## ಗ್ರಂಥಋಣ

[1] ಡಾ. ಡಿ. ಎನ್‌ಯೋಗೀಶ್ವರಪ್ಪಕಲ್ಪಶೋಧ ಪುಟ 224 – 242, ಪ್ರಗತಿ ಪ್ರಕಾಶನ, ಬೆಂಗಳೂರು. 2012

[2] ಡಾ. ಡಿ. ಎನ್‌ಯೋಗೀಶ್ವರಪ್ಪಕಲ್ಪಶೋಧ ಪುಟ 224 – 242, ಪ್ರಗತಿ ಪ್ರಕಾಶನ, ಬೆಂಗಳೂರು. 2012

[3] ಮೆಕೆಂಜಿಯವರ ಪ್ರಕಟಿತ ಆಂಗ್ಲ ಕೈಫಿಯತ್ತು (1801)

[4] ಕರ್ನಾಟಕ ಗ್ರಾಮಸೂಚಿ :ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು 1985.